# ಎನ್‌ಐಟಿಕೆ ಸಂಸ್ಥಾಪನ ದಿನಾಚರಣೆ



**ಸುರತ್ಕಲ್, ಆ. 8:** ಎನ್‌ಐಟಿಕೆ ಸುರತ್ಕಲ್ ತನ್ನ 65ನೇ ಸಂಸ್ಥಾಪನ ದಿನವನ್ನು ಅದರ ಸಂಸ್ಥಾಪಕ ಪಿತಾಮಹ ಶ್ರೀ ಉಳ್ಳಾಲ ಶ್ರೀನಿವಾಸ ಮಲ್ಯ ಅವರಿಗೆ ಗೌರವ ಸಲ್ಲಿಸುವ ಮೂಲಕ ಮಂಗಳವಾರ ಆಚರಿಸಲಾಯಿತು.

ಸುರತ್ಕಲ್ ಆವರಣದ ಪ್ರವೇಶ ದ್ವಾರದಲ್ಲಿರುವ ಸಂಸ್ಥೆಯ ಸ್ಥಾಪಕ ಪ್ರತಿಮೆಗೆ ನಿರ್ದೇಶಕ ಪ್ರೊ| ಬಿ. ರವಿ ಮಾಲಾರ್ಪಣೆ ಮಾಡಿದರು.

ಕರ್ನಾಟಕ ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜು ಅಥವಾ ಕೆಆರ್‌ಇಸಿ ನಿರ್ಮಾಣ, ಜತೆಗೆ ಮಂಗಳೂರಿನಲ್ಲಿ ಸಮುದ್ರ ಬಂದರು, ವಿಮಾನ ನಿಲ್ದಾಣ, ರೈಲ್ವೇ ಮಾರ್ಗಗಳು, ರಾಷ್ಟ್ರೀಯ ಹೆದ್ದಾರಿ, ಸೇತುವೆಗಳು ಮತ್ತು ಇತರ ಅನೇಕ ಪ್ರಮುಖ ಕಾಮಗಾರಿಗಳ ನಿರ್ಮಾಣಕ್ಕೆ ಕಾರಣವಾದ ಮಲ್ಯ ಅವರ ದೂರದೃಷ್ಟಿ ಮತ್ತು ಪರಿಶ್ರಮವನ್ನು ಪ್ರೊ| ಬಿ. ರವಿ ಸ್ಮರಿಸಿದರು.

ಪ್ಲಾನ್ ಇಂಟರ್ ನ್ಯಾಶನಲ್‌ನ ಸಿಇಒ, 1976 ರ ಹಳೆಯ ವಿದ್ಯಾರ್ಥಿ ರಾಜ್ ನೂಯಿ ಗೌರವ ಅವರು ಸಂಸ್ಥಾಪನ ದಿನವನ್ನು ಉಲ್ಲೇಖಿಸಿ ಮಾತನಾಡಿದರು.

ಎನ್ ಐಟಿಕೆ ಹಳೆಯ ವಿದ್ಯಾರ್ಥಿಗಳ ಸಂಘದ ಬೆಂಗಳೂರು ಘಟಕದ ಅಧ್ಯಕ್ಷ ಎಂ. ನಿರಂಜನ್ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದರು.

ಕಾರ್ಯಕ್ರಮದಲ್ಲಿ ಹತ್ತನೇ ತರಗತಿ ಮತ್ತು ಹನ್ನೆರಡನೇ ತರಗತಿಯಲ್ಲಿ ಶೈಕ್ಷಣಿಕ ಉತ್ಕೃಷ್ಟತೆಯನ್ನು ಸಾಧಿಸಿದ ಎನ್‌ಐಟಿಕೆ ಸಿಬಂದಿಯ ಸುಮಾರು 20 ಮಕ್ಕಳಿಗೆ ಪ್ರಮಾಣಪತ್ರಗಳನ್ನು ನೀಡಲಾಯಿತು. 1981ರ ಬ್ಯಾಚ್ ಹಳೆಯ ವಿದ್ಯಾರ್ಥಿಗಳು ಸ್ಥಾಪಿಸಿದ ಮೆರಿಟ್ ವಿದ್ಯಾರ್ಥಿವೇತನವನ್ನು ಸಹ ನೀಡಲಾಯಿತು. ಎನ್‌ಐಟಿಕೆಯಲ್ಲಿ 25 ವರ್ಷ ಸೇವೆ ಸಲ್ಲಿಸಿದ ಏಳು ಬೋಧಕ ಸಿಬಂದಿ ಮತ್ತು ಇತರ ಹತ್ತು ಸಿಬಂದಿಯನ್ನು ಸಮ್ಮಾನಿಸಲಾಯಿತು.

ಎನ್ ಐಟಿಕೆ ಮಾಜಿ ನಿರ್ದೇಶಕ ಪ್ರೊ| ಎಸ್.ಎಸ್. ಮೂರ್ತಿ ಮುಖ್ಯ ಅತಿಥಿಯಾಗಿದ್ದು, ಶುಭಹಾರೈಸಿದರು. ಎನ್‌ಐಟಿಕೆಯ 300 ಬೋಧಕರು, ಸಿಬಂದಿ, ವಿದ್ಯಾರ್ಥಿಗಳು ಮತ್ತು ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

Udayavani, Date:09/08/24 p, 02